


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬನೂ ಮುಸ್ತಲಖ್ ದಂಡಯಾತ್ರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09-08-2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮುರೈಸೀಅ್ ಯುದ್ಧಕ್ಕೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಅಬ್ದುಲ್ಲಾಹ್ ಬಿನ್ ಉಬಯ್ ಹಝ್ರತ್ ಪೈಗಂಬರ್(ಸ)ರ ಕುರಿತು ತಪ್ಪಾದ ಮಾತುಗಳನ್ನಾಡಿದರು ಮತ್ತು ಕಾಪಟ್ಯದಿಂದ ವರ್ತಿಸಿದರು ಎಂದೂ ಪ್ರಸ್ತಾಪಿಸಲಾಗಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಯುದ್ಧ ಕೊನೆಗೊಂಡ ನಂತರ ಹಝ್ರತ್ ಪೈಗಂಬರ್(ಸ) ಕೆಲವು ದಿನಗಳ ತನಕ ಮುರೈಸೀಅ್‌ನಲ್ಲಿ ತಂಗಿದರು. ಆದರೆ ಈ ತಂಗುವಿಕೆಯ ವೇಳೆ ಕಪಟವಿಶ್ವಾಸಿಗಳ ಕಡೆಯಿಂದ ಎಂತಹ ಅಸಹನೀಯವಾದ ಘಟನೆ ನಡೆಯಿತು ಎಂದರೆ ಅದರಿಂದ ದುರ್ಬಲ ಮುಸ್ಲಿಮರ ನಡುವೆ ಆಂತರಿಕ ಯುದ್ಧ ನಡೆಯುವ ಸಾಧ್ಯತೆಯಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಸಂದರ್ಭೋಚಿತ ಹಾಗೂ ವಿವೇಕಯುತ ಪ್ರಭಾವವು ಮುಸ್ಲಿಮರನ್ನು ಅದರ ಅಪಾಯಕಾರಿ ಪರಿಣಾಮಗಳಿಂದ ರಕ್ಷಿಸಿತು.

ಘಟನೆಯೇನೆಂದರೆ, ಹಝ್ರತ್ ಉಮರ್(ರ)ರ ಜಹ್‌ಜಾಹ್ ಎಂಬ ಹೆಸರಿನ ಒಬ್ಬ ಸೇವಕ ಮುರೈಸೀಅ್‌ದ ಒಂದು ಕಾರಂಜಿಗೆ ನೀರು ತರಲು ಹೋದನು. ಅದೇ ವೇಳೆ ಸನಾನ್ ಎಂಬ ಹೆಸರಿನ ಮತ್ತೊಬ್ಬ ವ್ಯಕ್ತಿ ಸಹ ನೀರು ತರಲು ಅಲ್ಲಿಗೆ ತಲುಪಿದನು. ಆತನು ಅನ್ಸಾರರ ಮಿತ್ರಪಕ್ಷದವನಾಗಿದ್ದನು. ಅವರಿಬ್ಬರೂ ಸಾಮಾನ್ಯ ಮತ್ತು ಮೂಢ ವ್ಯಕ್ತಿಗಳಾಗಿದ್ದರು. ಕಾರಂಜಿಯ ಬಳಿ ಅವರಿಬ್ಬರೂ ಪರಸ್ಪರ ಜಗಳವಾಡಿದರು. ಜಹ್‌ಜಾಹ್ ಸನಾನ್‌ನನ್ನು ಹೊಡೆದನು. ಸನಾನ್ ಜೋರಾಗಿ ಎಲೈ ಅನ್ಸಾರ್ ಸಮೂಹವೇ ನನ್ನ ಸಹಾಯಕ್ಕಾಗಿ ಬನ್ನಿರಿ ಎಂದು ಕಿರುಚಿದನು. ಇದನ್ನು ನೋಡಿದಾಗ ಜಹ್‌ಜಾಹ್ ಕೂಡ ಮುಹಾಜಿರರನ್ನು ಸಹಾಯಕ್ಕಾಗಿ ಕರೆದನು. ಈ ಶಬ್ದಗಳನ್ನು ಕೇಳಿದ ಅನ್ಸಾರ್ ಮತ್ತು ಮುಹಾಜಿರರು ಖಡ್ಗಗಳನ್ನು ಎತ್ತಿ ಕಾರಂಜಿಯ ಬಳಿಗೆ ಧಾವಿಸಿದರು. ನೋಡುತ್ತಿದ್ದಂತೆಯೇ ಅಲ್ಲಿ ಬಹಳಷ್ಟು ಜನರು ಒಟ್ಟುಗೂಡಿದರು. ಉಭಯ ಪಕ್ಷಗಳು ಪರಸ್ಪರ ದಾಳಿ ನಡೆಸುವ ಸಾಧ್ಯತೆಯಿತ್ತು. ಅಷ್ಟರಲ್ಲಿ ಕೆಲವು ವಿವೇಕಶಾಲಿ ಜನರು ಮುಹಾಜಿರರನ್ನು ಮತ್ತು ಅನ್ಸಾರರನ್ನು ಬೇರ್ಪಡಿಸಿ ಸಂಧಾನ ಮಾಡಿಸಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ಈ ವಾರ್ತೆ ತಲುಪಿದಾಗ ಅವರು ಅದನ್ನು ಮೂಢತನದ ಪ್ರಕಟಣೆ ಎಂದು ಹೇಳಿದರು ಮತ್ತು ಕೋಪವನ್ನು ಪ್ರಕಟಿಸಿದರು. ಕಪಟವಿಶ್ವಾಸಿಗಳ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್‌ಗೆ ಈ ಘಟನೆಯ ಬಗ್ಗೆ ಗೊತ್ತಾದಾಗ ಆತನು ಈ ಗಲಭೆಯನ್ನು ಪುನಃ ಎಬ್ಬಿಸಲು ಬಯಸಿದನು. ಆತನು ತನ್ನ ಸಂಗಡಿಗರನ್ನು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ವಿರುದ್ಧ ಚೆನ್ನಾಗಿ ರೊಚ್ಚಿಗೆಬ್ಬಿಸಿದನು. ಎಷ್ಟರ ಮಟ್ಟಿಗೆ ಮಿತಿ ಮೀರಿದನು ಎಂದರೆ, ನಾವು ಮದೀನಕ್ಕೆ ಹೋಗಿ ಆದರಣೀಯ ವ್ಯಕ್ತಿ ಅಥವಾ ಗುಂಪು ನೀಚ ವ್ಯಕ್ತಿಯನ್ನು ಅಥವಾ ಗುಂಪನ್ನು ಪಟ್ಟಣದಿಂದ ಹೊರಗೆ ಹಾಕುವೆವು ಎಂದು ಕೂಡ ಆತನು ಹೇಳಿದನು. ಆ ವೇಳೆ ಒಬ್ಬ ನಿಷ್ಠಾವಂತ ಮುಸ್ಲಿಮ್ ಬಾಲಕ ಝೈದ್ ಬಿನ್ ಅರ್‌ಕಮ್ ಅಲ್ಲಿದ್ದನು. ಆತನು ಈ ಮಾತುಗಳನ್ನು ಆಲಿಸಿದಾಗ ಬೇಗನೇ ತನ್ನ ಚಿಕ್ಕಪ್ಪನ ಮೂಲಕ ಆ ಮಾತನ್ನು ಹಝ್ರತ್ ಪೈಗಂಬರ್(ಸ)ರಿಗೆ ತಲುಪಿಸಿದನು. ಹಝ್ರತ್ ಉಮರ್(ರ) ಈ ಮಾತುಗಳನ್ನು ಆಲಿಸಿದಾಗ ಬಹಳ ಕೋಪಗೊಂಡರು ಮತ್ತು ಅಬ್ದುಲ್ಲಾಹ್ ಬಿನ್ ಉಬಯ್‌ನನ್ನು ವಧಿಸಲು ಹಝ್ರತ್ ಪೈಗಂಬರ್(ಸ)ರೊಡನೆ ಅನುಮತಿ ಕೇಳಿದರು. ಆದರೆ ಹಝ್ರತ್ ಪೈಗಂಬರ್(ಸ) ಸೌಮ್ಯವಾಗಿ ವರ್ತಿಸಲು ನಿರ್ದೇಶಿಸಿದರು ಹಾಗೂ ಅಬ್ದುಲ್ಲಾಹ್ ಮತ್ತು ಆತನ ಸಂಗಡಿಗರನ್ನು ಕರೆತರಲು ಹೇಳಿದರು. ಅಂತಹ ಮಾತುಗಳನ್ನು ಹೇಳಿಲ್ಲ ಎಂದು ಅವರು ಆಣೆ ಹಾಕಿ ಹೇಳಿದರು. ಹಝ್ರತ್ ಪೈಗಂಬರ್(ಸ) ತಕ್ಷಣವೇ ಅಲ್ಲಿಂದ ಹೊರಡಲು ಆದೇಶ ನೀಡಿದರು ಹಾಗೂ ಮುಸ್ಲಿಮರ ಸೇನೆ ಅಲ್ಲಿಂದ ಹೊರಟಿತು. ಈ ಸಂದರ್ಭದಲ್ಲಿ ಈ ತಕ್ಷಣದ ಹೊರಡುವಿಕೆಯ ಬಗ್ಗೆ ಉಸೈದ್ ಬಿನ್ ಹುಝೈರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಅಬ್ದುಲ್ಲಾಹ್ ಬಿನ್ ಉಬಯ್‌ನ ಮಾತುಗಳನ್ನು ಆಲಿಸಲಿಲ್ಲವೇ? ಉಸೈದ್(ರ) ಹೇಳಿದರು: ಹೌದು ಯಾ ರಸೂಲಲ್ಲಾಹ್, ನೀವು ಬೇಕಾದರೆ ಮದೀನಕ್ಕೆ ತಲುಪಿ ಅಬ್ದುಲ್ಲಾಹ್ ಬಿನ್ ಉಬಯ್‌ನನ್ನು ಪಟ್ಟಣದಿಂದ ಹೊರಗೆ ಹಾಕಬಹುದಾಗಿದೆ.

ಅಬ್ದುಲ್ಲಾಹ್ ಬಿನ್ ಉಬಯ್‌ನ ಪುತ್ರನಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ವಿನಂತಿಸಿಕೊಂಡರು: ಯಾ ರಸೂಲಲ್ಲಾಹ್, ನೀವು ನನಗೆ ಆದೇಶ ನೀಡಿದರೆ ನಾನು ತಕ್ಷಣವೇ ಅಬ್ದುಲ್ಲಾಹ್ ಬಿನ್ ಉಬಯ್‌ನ ತಲೆಯನ್ನು ನಿಮ್ಮ ಸನ್ನಿಧಿಯಲ್ಲಿ ಇರಿಸುವೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಆತನನ್ನು

ವಧಿಸಲು ಉದ್ದೇಶಿಸಿಲ್ಲ ಮತ್ತು ವಧಿಸಲು ಯಾರಿಗೂ ಆದೇಶವೂ ನೀಡಿಲ್ಲ. ಖಂಡಿತವಾಗಿಯೂ ನಾವು ಆತನೊಡನೆ ಉತ್ತಮವಾಗಿ ವರ್ತಿಸುವೆವು. ಈ ಯಾತ್ರೆಯ ವೇಳೆ ಹಝ್ರತ್ ಪೈಗಂಬರ್[ಸ]ರಿಗೆ ದಿವ್ಯವಾಣಿ ಅವತೀರ್ಣವಾಯಿತು. ಅದರಲ್ಲಿ ಝೈದ್ ಬಿನ್ ಅರ್ಕಮ್[ರ]ರ ಮಾತಿನ ರುಜುವಾತು ಆಯಿತು.

ಹಝ್ರತ್ ಮುಸ್ಲಿಹ್ ಮೌಊದ್[ರ] ಈ ಪೂರ್ತಿ ಘಟನೆಯನ್ನು ವಿವರಿಸಿದ ನಂತರ ಹೇಳುತ್ತಾರೆ: ಇಸ್ಲಾಮಿನ ಸೇನೆ ಮದೀನದ ಸಮೀಪಕ್ಕೆ ತಲುಪಿದಾಗ ಅಬ್ದುಲ್ಲಾಹ್ ಬಿನ್ ಉಬಯ್‌ನ ಪುತ್ರ ಮುಂದೆ ಬಂದು ತನ್ನ ತಂದೆಯ ಮಾರ್ಗಕ್ಕೆ ಅಡ್ಡವಾಗಿ ನಿಂತರು ಮತ್ತು ಹೀಗೆ ಹೇಳಿದರು: ನೀವು ಹಝ್ರತ್ ಪೈಗಂಬರ್[ಸ]ರ ವಿರುದ್ಧವಾಗಿ ಹೇಳಿದ ಮಾತನ್ನು ಹಿಂದಕ್ಕೆ ತೆಗೆಯುವ ತನಕ ನಾನು ನಿಮ್ಮನ್ನು ಮದೀನದ ಒಳಗೆ ಪ್ರವೇಶಿಸಲು ಬಿಡಲಾರೆನು. ಅಲ್ಲಾಹನ ನಬಿ ನೀಚನು ಮತ್ತು ನೀನು ಆದರಣೀಯನು ಎಂದು ಯಾವ ನಾಲಗೆಯಿಂದ ಹೇಳಲಾಗಿತ್ತೋ ಅದೇ ನಾಲಗೆಯಿಂದ ಅಲ್ಲಾಹನ ಪ್ರವಾದಿ ಆದರಣೀಯರು ಮತ್ತು ನೀನು ನೀಚನು ಎಂದು ಹೇಳಬೇಕಾಗುವುದು. ಅಬ್ದುಲ್ಲಾಹ್ ಬಿನ್ ಸುಲೂಲ್ ಆಶ್ಚರ್ಯಚಕಿತನೂ ಭಯಚಕಿತನೂ ಆದನು ಮತ್ತು ಹೀಗೆ ಹೇಳಿದನು: ಎಲೈ ನನ್ನ ಪುತ್ರಾ, ನಾನು ನಿನ್ನ ಮಾತನ್ನು ಒಪ್ಪುತ್ತೇನೆ. ಮುಹಮ್ಮದ್[ಸ] ಆದರಣೀಯರು ಮತ್ತು ನಾನು ನಿಂದಿತನೂ ಆಗಿರುವೆನು. ಈ ಮಾತನ್ನು ಹೇಳಿದಾಗ ಯುವಕನಾದ ಅಬ್ದುಲ್ಲಾಹ್ ತನ್ನ ತಂದೆಯನ್ನು ಹೋಗಲು ಬಿಟ್ಟರು.

ಈ ಯಾತ್ರೆಯ ವೇಳೆ ಹಝ್ರತ್ ಪೈಗಂಬರ್[ಸ]ರ ಒಂಟೆ ಕಾಣೆಯಾಗಿತ್ತು. ಕಪಟವಿಶ್ವಾಸಿಗಳಲ್ಲಿ ಒಬ್ಬ ವ್ಯಕ್ತಿ ಅದಕ್ಕಾಗಿ ಸಂಭ್ರಮಿಸುತ್ತಿದ್ದನು. ಒಂದು ಸಭೆಯಲ್ಲಿ ಆತನು ಹೀಗೆ ಹೇಳಿದನು: ರಸೂಲುಲ್ಲಾಹ್[ಸ]ರಿಗೆ ಅದೃಶ್ಯವಾದ ದೊಡ್ಡ ದೊಡ್ಡ ವಾರ್ತೆಗಳು ಲಭಿಸುತ್ತಿರುವಾಗ ಈ ಒಂಟೆಯ ಬಗ್ಗೆ ಅರಿವು ಲಭಿಸುವುದಿಲ್ಲವೇ? ಸಭೆಯಲ್ಲಿ ಇದ್ದ ಜನರು ಆತನ ಕಾಪಟ್ಯದ ಮಾತುಗಳನ್ನು ಆಲಿಸಿದಾಗ ಆತನನ್ನು ತಮ್ಮಿಂದ ಬೇರ್ಪಡಿಸಿದರು. ಆತನು ಹಝ್ರತ್ ಪೈಗಂಬರ್[ಸ]ರ ಸಭೆಗೆ ತಲುಪಿದಾಗ ಹಝ್ರತ್ ಪೈಗಂಬರ್[ಸ] ಹೀಗೆ ಹೇಳಿದರು: ಈ ಘಟನೆಯಿಂದ ಒಬ್ಬ ವ್ಯಕ್ತಿ ಸಂಭ್ರಮಿಸುತ್ತಿದ್ದಾನೆ. ಅದೃಶ್ಯದ ಅರಿವು ಅಲ್ಲಾಹನಿಗೆ ಮಾತ್ರವಿರುವುದು. ಎದುರಿಗೆ ಇರುವ ಆ ಕಣಿವೆಯಲ್ಲಿ ಆ ಒಂಟೆ ಇದೆ ಎಂದು ಅಲ್ಲಾಹನು ನನಗೆ ಅದರ ಕುರಿತು ತಿಳಿಸಿದ್ದಾನೆ. ಇದನ್ನು ಆಲಿಸಿ ಆ ಕಪಟವಿಶ್ವಾಸಿ ಆಶ್ಚರ್ಯಗೊಂಡು ತಬ್ಬಿಬ್ಬಾದನು ಮತ್ತು ನಾಚಿಹೋದನು. ಆತನು ತನ್ನ ಸಂಗಡಿಗರ ಸಭೆಯಲ್ಲಿ ಹೀಗೆ ಹೇಳಿದನು: ನನಗೆ ರಸೂಲುಲ್ಲಾಹ್[ಸ]ರ ವಿಷಯದಲ್ಲಿ ಸಂಶಯವಿತ್ತು. ಆದರೆ ಇಂದು ಎಲ್ಲ ಸಂಶಯಗಳು ದೂರವಾಗಿವೆ ಮತ್ತು ನಾನು ಇಂದೇ ಮುಸ್ಲಿಮನಾಗಿರುವೆನು ಎಂಬಂತಿದೆ.

(ಹುಝೂರ್ ಹೇಳಿದರು:) ಇದರ ಇನ್ನಷ್ಟು ವಿವರಣೆ ಮತ್ತು ಘಟನೆಗಳು ಮುಂದಿನ ಬಾರಿ ವಿವರಿಸಲಾಗುವುದು – ಇನ್‌ಶಾ ಅಲ್ಲಾಹ್. ಈಗ ನಾನು ಬಾಂಗ್ಲಾದೇಶದ ಸ್ಥಿತಿಗಳ ಬಗ್ಗೆಯೂ ಹೇಳಲು ಬಯಸುತ್ತೇನೆ. ಸರ್ಕಾರದ ವಿರುದ್ಧ ಅಲ್ಲಿ ಗಲಭೆ ಎದ್ದಿತ್ತು. ಸರ್ಕಾರ ಕೊನೆಗೊಂಡಿದೆ ಆದರೆ ಗಲಭೆ ಮುಂದುವರೆದಿದೆ. ನಿನ್ನೆಯಿಂದ ಸ್ವಲ್ಪ ನೆಮ್ಮದಿ ಇದೆ. ಜಮಾಅತಿನ ವಿರೋಧಿಗಳು ಪರಿಸ್ಥಿತಿಯ ಲಾಭ ಪಡೆದು ಅಹ್ಮದಿಯರಿಗೆ ನಷ್ಟ ಉಂಟುಮಾಡಲು ಆರಂಭಿಸಿದ್ದಾರೆ. ನಮ್ಮ ಕೆಲವು ಮಸೀದಿಗಳನ್ನು ಕೆಡವಿಹಾಕಿದ್ದಾರೆ ಮತ್ತು ಅವುಗಳನ್ನು ಸುಟ್ಟು ಹಾಕಿದ್ದಾರೆ. ಜಾಮಿಅ ಅಹ್ಮದಿಯಾ ಮತ್ತು ಜಮಾಅತಿನ ಕಟ್ಟಡಗಳನ್ನು ಹಾನಿಗೊಳಿಸಿದ್ದಾರೆ. ಅಲ್ಲೂ ಸಾಮಾನುಗಳನ್ನು ಒಡೆದು ಹಾಕಿದ್ದಾರೆ ಮತ್ತು ಸುಟ್ಟು ಹಾಕಿದ್ದಾರೆ. ಅನೇಕ ಅಹ್ಮದಿಯರು ಗಾಯಗೊಂಡಿರುವರು. ಅವರ ಮನೆಗಳನ್ನು ಸುಟ್ಟು ಹಾಕಲಾಗಿದೆ ಮತ್ತು ಹಾನಿಗೊಳಿಸಲಾಗಿದೆ. ಕೆಲವು ಮನೆಗಳನ್ನು ಪೂರ್ಣವಾಗಿ ಸುಟ್ಟು ಹಾಕಿದ್ದಾಗಿ ಮಾಹಿತಿ ಲಭಿಸಿದೆ ಪೂರ್ಣವಾಗಿಯೂ ಅರಾಜಕತೆ ಉಂಟಾಗಿದೆ.

ಅಹ್ಮದಿಯರಿಗೆ ಆ ಪ್ರದೇಶದಲ್ಲಿ ಜಲ್ಸದ ವೇಳೆ ಎರಡು ಬಾರಿ ನಷ್ಟಗಳು ಉಂಟಾಗಿವೆ. ಅದಾಗ್ಯೂ ಅವರ ವಿಶ್ವಾಸದಲ್ಲಿ ಯಾವುದೇ ಚಂಚಲತೆ ಉಂಟಾಗಿಲ್ಲ. ಅಲ್ಲಾಹನ ಅನುಗ್ರಹದಿಂದ ವಿಶ್ವಾಸದಲ್ಲಿ ಸುದೃಢವಾಗಿ ಇದ್ದಾರೆ. ಅಲ್ಲಾಹನಿಗಾಗಿ ನಾವು ಇವೆಲ್ಲವನ್ನು ಸಹಿಸುವೆವು ಎಂದು ಅವರು ಹೇಳಿರುವರು. ಅಲ್ಲಾಹನು ಕರುಣೆ ಮತ್ತು ಕೃಪೆದೋರಲಿ. ಅಹ್ಮದಿಯರನ್ನು ತನ್ನ ಅಭಯದಲ್ಲಿ ಇರಿಸಲಿ. ವಿರೋಧಿಗಳನ್ನು ಹಿಡಿಗೂಡಲಿ.

ಅದೇ ರೀತಿಯಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲೂ ಪುನಃ ಕಠಿಣ ಪರಿಸ್ಥಿತಿಗಳು ಉಂಟಾಗಿವೆ. ಅಲ್ಲಾಹನು ಅವರನ್ನು ಸಹ ಎಲ್ಲ ದ್ರೋಹಗಳಿಂದ ರಕ್ಷಿಸಲಿ. ಇತ್ತೀಚಿಗೆ ಮುಲ್ಲಾಗಳು ಮತ್ತು ಸ್ವಾರ್ಥ ಜನರು ಅಹ್ಮದಿಯರ ವಿರುದ್ಧ ಇನ್ನಷ್ಟು ಕಾರ್ಯನಿರತರಾಗಿದ್ದಾರೆ. ಈ ಜನರು ಅಲ್ಲಾಹನ ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಲ್ಲಿ ದೌರ್ಜನ್ಯ ಮಾಡುತ್ತಿದ್ದಾರೆ. ಅಲ್ಲಾಹನು ಅವರನ್ನು ಕೂಡ ಬೇಗನೇ ಹಿಡಿಗೂಡಲಿ.

ಪೆಲಸ್ತೀನಿನ ಮುಸ್ಲಿಮರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಪೀಡಕರನ್ನು ಹಿಡಿಗೂಡಲಿ ಮತ್ತು ಈ ದೌರ್ಜನ್ಯ ಕೊನೆಗೊಳ್ಳಲಿ. ಒಟ್ಟಾರೆಯಾಗಿ ಮುಸ್ಲಿಮರಿಗಾಗಿ ದುಆ ಮಾಡಿರಿ. ಅವರು ಪರಸ್ಪರ ಮಾಡುತ್ತಿರುವ ದೌರ್ಜನ್ಯ ಕೊನೆಗೊಳ್ಳಲಿ ಮತ್ತು ಅಲ್ಲಾಹನೊಂದಿಗೆ ಯಥಾರ್ಥ ಸಂಬಂಧವನ್ನು ಉಂಟುಮಾಡುವವರಾಗಲಿ. ಕಾಲಘಟ್ಟದ ಇಮಾಮರನ್ನು ನಂಬುವವರಾಗಲಿ. ಇದೇ ಅವರ ರಕ್ಷೆ ಮತ್ತು ಮೋಕ್ಷದ ಮಾರ್ಗವಾಗಿದೆ.

(ಕೊನೆಗೆ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ್ವಾಯಿಬ್ ನಿರ್ವಹಿಸುವುದಾಗಿ ಹೇಳಿದರು:)

ಮೊದಲನೆಯದಾಗಿ ಗುಜರಾತ್ ಜಿಲ್ಲೆಯ ಡಾಕ್ಟರ್ ಝುಕಾಉರ್ರಹ್ಮಾನ್ ಸಾಹಿಬ್ ಶಹೀದ್‌ರದ್ದಾಗಿದೆ. ದಿವಂಗತರನ್ನು ಕೆಲವು ದಿನಗಳ ಹಿಂದೆ ಜಲ್ಸದ ದಿನಗಳಲ್ಲಿ 53ನೇ ವಯಸ್ಸಿನಲ್ಲಿ ಶಹೀದ್ ಮಾಡಲಾಯಿತು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಧನತ್ಯಾಗಗಳಲ್ಲಿ ಮುಂದಿದ್ದರು. ಸೃಷ್ಟಿ ಸೇವೆ ಮಾಡಲು ಉತ್ಸಾಹ ಹೊಂದಿದ್ದ ಮತ್ತು ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುವವರಾಗಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೇ ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು.

ಎರಡನೆಯದಾಗಿ ಮಲಿಕ್ ಬಶೀರ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಈದ ಬಶೀರ್ ಸಾಹಿಬರದ್ದಾಗಿದೆ. ದಿವಂಗತರು ಘಾನದ ಮುರಬ್ಬಿಯಾದ ಮಲಿಕ್ ಗುಲಾಂ ಅಹ್ಮದ್ ಸಾಹಿಬ್‌ರ ತಾಯಿಯಾಗಿದ್ದರು. ಮುರಬ್ಬಿ ಸಾಹಿಬ್‌ರು ಕರ್ಮಮೈದಾನದಲ್ಲಿ ಇರುವ ಕಾರಣದಿಂದ ತನ್ನ ತಾಯಿಯ ಜನಾಝ ಮತ್ತು ದಫನ್ ಕಾರ್ಯಗಳಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. ದಿವಂಗತರು ತಹಜ್ಜುದ್ ನಿರ್ವಹಿಸುವವರು, ಐದು ಹೊತ್ತಿನ ನಮಾಝ್ ಅನುಷ್ಠಿಸುವವರು, ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವನ್ನು ಹೊಂದಿದವರು, ದುಆ ಮಾಡುವವರು, ಅಲ್ಲಾಹನ ಸಂಪ್ರೀತಿಯಲ್ಲಿ ಸಂತೃಪ್ತರು ಮತ್ತು ಸಾತ್ವಿಕ ಮಹಿಳೆ ಆಗಿದ್ದರು. (ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis** (atba)*
At, ***'Masjid Mubarak'**, Islamabad, Tilford,* U.K. On 09-08-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon